## ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ | "ವಿದ್ಯಾರ್ಥಿಗಳಿಗೆ ಪ್ರೇರಣೆ" ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು |

**ಪ್ರಸ್ತಾವನೆ:**

1. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವು ದೊಡ್ಡ ಕಳಕಳಿಯ ವಿಷಯವಾಗಿದೆ. ಸರ್ಕಾರಿ ಶಾಲೆಗಳಲ್ಲಿ ಕಳಪೆ ಗುಣಮಟ್ಟದ ಶಿಕ್ಷಣಕ್ಕೆ ಪ್ರಮುಖ ಕಾರಣಗಳೆಂದರೆ, ಬಹುವರ್ಗ ಬೋಧನೆ, ಹೆಚ್ಚಿನ ಸರ್ಕಾರಿ ಶಾಲೆಗಳಲ್ಲಿ ಕಡಿಮೆ ವಿದ್ಯಾರ್ಥಿಗಳ ಸಂಖ್ಯೆ ಇರುವುದು, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆಯನ್ನು ನೀಡದಿರುವುದು, ವಿದ್ಯಾರ್ಥಿಗಳಲ್ಲಿ ಪ್ರೇರಣೆಯ ಕೊರತೆ, ಶಿಕ್ಷಕರಲ್ಲಿ ಬದ್ಧತೆ ಇಲ್ಲದಿರುವುದು ಮತ್ತು ತೃಪ್ತಿಕರವಲ್ಲದ ಆಡಳಿತ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಲಭ್ಯತೆ, ಶಾಲಾ ಭೌತಿಕ ಸೌಲಭ್ಯಗಳು ಮತ್ತು ಉಚಿತ ಪಠ್ಯ ಪುಸ್ತಕ, ಸಮವಸ್ತ್ರ ಮತ್ತು ಬೈಸಿಕಲ್‌ಗಳನ್ನು ನೀಡುತ್ತಿರುವುದು ವಿದ್ಯಾರ್ಥಿಗಳ ಕಲಿಕಾ ಸಾಧನೆಗೆ ಪೂರಕವಾಗಿದ್ದರೂ ಸಹ ವಿದ್ಯಾರ್ಥಿಗಳ ಸ್ವಪ್ರೇರಣೆಯು ಪ್ರಮುಖವಾದ ಅಂಶವಾಗಿರುತ್ತದೆ.

2. ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಧನೆಯನ್ನು ಗುರುತಿಸಲು ಹಾಗೂ ಅವರನ್ನು ಗುಣಮಟ್ಟದ ಕಲಿಕೆಗೆ ಉತ್ತೇಜಿಸಲು ಒಂದು ಉತ್ತಮ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರವು ಹೊಂದಿದೆ.

3. 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು, ಪ್ರಸ್ತುತ ಇರುವ ಯೋಜನೆಗಳನ್ನು ತಾರ್ಕಿಕವಾಗಿ ಸಮನ್ವಯಗೊಳಿಸಿ ಕೆಳಕಂಡ 5 ಹೊಸ ಕಾರ್ಯಕ್ರಮಗಳಡಿ ತರಲಾಗುವುದು:

   - ಶಿಕ್ಷಣ ಗುಣಮಟ್ಟ ಸುಧಾರಣಾ ಉಪಕ್ರಮ.
   - ಗುಣಮಟ್ಟ ಖಾತರಿಯ ಉಪಕ್ರಮಗಳು
   - ತಂತ್ರಜ್ಞಾನ ಆಧಾರಿತ ಕಲಿಕೆ
   - ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು
   - ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಕಾರ್ಯಕ್ರಮಗಳು

   ಎಂದು ಘೋಷಿಸಲಾಗಿರುತ್ತದೆ.

4. ಮೇಲೆ ಪಟ್ಟಿ ಮಾಡಲಾದ ಐದು ಕಾರ್ಯಕ್ರಮಗಳ ಪೈಕಿ, ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ(TALP) ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ವಿದ್ಯಾರ್ಥಿ ಪ್ರೇರಕ ಪ್ರೋತ್ಸಾಹಕಗಳ ಹಲವು ಘಟಕಗಳಿಗೆ ಈಗಾಗಲೇ ಸರ್ಕಾರವು ಅನುಮೋದನೆ ನೀಡಿರುತ್ತದೆ. ಪ್ರಸ್ತುತ ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಿ ಅನುಮೋದನೆ ನೀಡಿರುತ್ತದೆ.
5. ಆದುದರಿಂದ ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಈ ಕೆಳಗಿನಂತೆ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಮಾಹಿತಿ 2016, ಬೆಂಗಳೂರು, ದಿನಾಂಕ: 22.07.2016**

1. 2016-17ನೇ ಸಾಲಿನಲ್ಲಿ "ವಿದ್ಯಾರ್ಥಿ ಪ್ರೇರಣೆ ಕಾರ್ಯಕ್ರಮಗಳ" ಅಡಿಯಲ್ಲಿ ಕೆಳಕಂಡ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.
   i. ತಾಲ್ಲೂಕು ಹಂತದಿಂದ ರಾಜ್ಯ ಹಂತದವರೆಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸುವ ಪ್ರತಿಭಾ ಕಾರಂಜಿ ಎಂದು ಕರೆಯಲ್ಪಡುವ ಕಾರ್ಯಕ್ರಮ;
   ii. ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಕ್ರೀಡಾ ಚಟುವಟಿಕೆಗಳು;
   iii. ಆದರ್ಶ ವಿದ್ಯಾಲಯಗಳು ಮತ್ತು ಆಯ್ದ ಪ್ರೌಢ ಶಾಲೆಗಳಲ್ಲಿ ನಿರ್ಧಿಷ್ಠ ಕ್ರೀಡೆಗಳ ಉತ್ತೇಜನ;
   iv. ಜಿಲ್ಲೆ ಮತ್ತು ರಾಜ್ಯ ಹಂತದಲ್ಲಿ ವಿಜ್ಞಾನ ಕಾರ್ಯಕ್ರಮಗಳ ಆಯೋಜನೆ;
   v. 2016ರ ಜವಹರ್ ಲಾಲ್ ನೆಹರೂ ರಾಷ್ಟ್ರೀಯ ವಿಜ್ಞಾನ ಪ್ರದರ್ಶನದ ಆತಿಥ್ಯ;
   vi. ಶಿಕ್ಷಣ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ಪ್ರತಿಭೆ ಆಧಾರಿತ ಪ್ರೇರಕ ಚಟುವಟಿಕೆಗಳು;
   vii. ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ (ಟಾಪರ್‌ಗಳಿಗೆ) ಪ್ರೋತ್ಸಾಹಕಗಳು;
   viii. ಯೋಗ ಚಟುವಟಿಕೆಗಳು

2. ಮೇಲ್ಕಾಣಿಸಿದ ಚಟುವಟಿಕೆಗಳ ವ್ಯಾಪ್ತಿ ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಗಳನ್ನು ಈ ಸರ್ಕಾರದ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.
3. ಪ್ರತಿ ಚಟುವಟಿಕೆಗಳಿಗೆ ಸವಿವರವಾದ ಕ್ರಿಯಾ ಯೋಜನೆಗಳನ್ನು ಸಂಬಂಧಿಸಿದ ಅನುಷ್ಠಾನ ಅಧಿಕಾರಿಗಳು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
4. 2016-17ನೇ ಸಾಲಿನಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ 25 ಕೋಟಿಗಳ ಅನುದಾನವನ್ನು ಅನುಮೋದಿಸಲಾಗಿದೆ. 2016-17ರ ಆಯವ್ಯಯ ಅಂದಾಜಿನ ಲೆಕ್ಕ ಶೀರ್ಷಿಕೆ 2202-01-101-0-08(ಯೋಜನೆ) ಅಡಿ ರೂ 15 ಕೋಟಿಗಳ ಅನುದಾನ ಲಭ್ಯವಿದೆ. ಉಳಿದ ಬೇಡಿಕೆಯನ್ನು ಪೂರಕ

ಅಂದಾಜುಗಳಲ್ಲಿ ಅವಕಾಶ ಮಾಡಿ ಒದಗಿಸಲಾಗುವುದು. ಮುಂದಿನ ವರ್ಷಗಳಲ್ಲಿ ಅನುಮೋದಿತ ಆಯವ್ಯಯದ ಅನುಸಾರ ಅಂದಾಜುಗಳನ್ನು ಅನುಮೋದಿಸಲಾಗುವುದು.

5. ಈ ಕಾರ್ಯಕ್ರಮಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಮುಖ್ಯ ನಿಯಂತ್ರಣ ಅಧಿಕಾರಿಯಾಗಿರುತ್ತಾರೆ.
6. ನಿರ್ದಿಷ್ಠ ಚಟುವಟಿಕೆಗಳಿಗೆ ಕ್ರಿಯಾ ಯೋಜನೆಯ ಅನುಮೋದನೆಯ ನಂತರ ಅನುದಾನ ಬಿಡುಗಡೆ ಆದೇಶವನ್ನು ಹೊರಡಿಸಲಾಗುವುದು.
7. ಅನುಷ್ಠಾನದಲ್ಲಿ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆಯ ನಿಯಮಗಳು ಮತ್ತು ವೆಚ್ಚ ಭರಿಸಲು ಸರ್ಕಾರಲ್ಲಿ ಪ್ರಚಲಿತದಲ್ಲಿರುವ ಎಲ್ಲ ನಿಯಮ/ಪದ್ಧತಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
8. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 393 ವೆಚ್ಚ–8/2016 ದಿನಾಂಕ 28.06.2016ರಲ್ಲಿ ನೀಡಲಾದ ಅಭಿಪ್ರಾಯದ ಅನುಸಾರ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

24/7/16

**(ಅಪರ್ಣಾ ಪಾವಟೆ)**
**ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ**
**ಉಪ ಕಾರ್ಯದರ್ಶಿ (ಯೋಜನೆ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಕಾರ್ಯದರ್ಶಿಯವರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,
6. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
7. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
8. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಕಲಬುರಗಿ.
9. ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
10. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

11. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
12. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
13. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು
14. ಉಪ ನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ಬೆಂಗಳೂರು
15. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
16. ಕಛೇರಿ ಪ್ರತಿ

ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಮಾಹಿತಿ 2016, ಬೆಂಗಳೂರು, ದಿನಾಂಕ: 22.07.2016ಕ್ಕೆ

ಅನುಬಂಧ

1. **ತಾಲ್ಲೂಕು ಹಂತದಿಂದ ರಾಜ್ಯ ಹಂತದವರೆಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸುವ ಪ್ರತಿಭಾ ಕಾರಂಜಿ ಎಂದು ಕರೆಯಲ್ಪಡುವ ಕಾರ್ಯಕ್ರಮ:** ಪ್ರಸ್ತುತ ಪ್ರತಿಭಾ ಕಾರಂಜಿ ಕಾರ್ಯಕ್ರಮದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಪುನರ್‌ರಚಿಸಿ, 30 ಚಟುವಟುಕೆಗಳಿಗೆ ಬದಲಾಗಿ 15 ಚಟುವಟಿಕೆಗಳಿಗೆ ಸೀಮಿತಗೊಳಿಸಬೇಕು. ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಮೊದಲ 3 ಸ್ಥಾನಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುಸ್ತಕಗಳನ್ನು ಬಹುಮಾನವನ್ನಾಗಿ ನೀಡುವುದು. ರಾಜ್ಯ ಮಟ್ಟದ ವಿಜೇತರಿಗೆ ಪುಸ್ತಕಗಳೊಂದಿಗೆ ನಗದು ಬಹುಮಾನವನ್ನೂ ಸಹ ನೀಡುವುದು. ಭಾರತ ಸರ್ಕಾರವು ಆಯೋಜಿಸುವ ರಾಷ್ಟ್ರ ಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮ ಕಲಾ ಉತ್ಸವಕ್ಕೆ ತಂಡಗಳನ್ನು ಆಯ್ಕೆ ಮಾಡಲು ಅನುವಾಗುವಂತೆ ಈ ಚಟುವಟಿಕೆಗಳನ್ನು ಅಕ್ಟೋಬರ್ ಮಾಹೆಯೊಳಗೆ ಪೂರ್ಣಗೊಳಿಸತಕ್ಕದ್ದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

   2016-17ಕ್ಕೆ ಅನುದಾನದ ವಿವರ: ರೂ 9.25 ಕೋಟಿ.

   ಅನುಷ್ಠಾನ ಜವಾಬ್ದಾರಿ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಉಸ್ತುವಾರಿಯಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅನುಮೋದನೆಯೊಂದಿಗೆ ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಸೂಕ್ತ ಅನುಷ್ಠಾನ ಸಮಿತಿಗಳನ್ನು ರಚಿಸಬಹುದಾಗಿರುತ್ತದೆ.

2. **ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಕ್ರೀಡಾ ಚಟುವಟಿಕೆಗಳು:** ಯುವಜನ ಸೇವಾ ಇಲಾಖೆಯ ಸಹಕಾರದೊಂದಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುವುದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

   2016-17ಕ್ಕೆ ಅನುದಾನದ ವಿವರ: ರೂ 3 ಕೋಟಿ.

   ಅನುಷ್ಠಾನ ಜವಾಬ್ದಾರಿ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಉಸ್ತುವಾರಿಯಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅನುಮೋದನೆಯೊಂದಿಗೆ ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಸೂಕ್ತ ಅನುಷ್ಠಾನ ಸಮಿತಿಗಳನ್ನು ರಚಿಸಬಹುದಾಗಿರುತ್ತದೆ.

3. ಆದರ್ಶ ವಿದ್ಯಾಲಯಗಳಲ್ಲಿ ನಿರ್ದಿಷ್ಟ ಕ್ರೀಡೆಗಳನ್ನು ಆಯೋಜಿಸುವುದು;
ಆದರ್ಶ ವಿದ್ಯಾಲಯಗಳಲ್ಲಿ ಮತ್ತು ಆಯ್ದ ಪ್ರೌಢ ಶಾಲೆಗಳಲ್ಲಿ ಆ ಕ್ರೀಡೆಗಳಲ್ಲಿ ಮಕ್ಕಳು ಉತ್ತಮ ಸಾಧನೆ ತೋರುವ ಉದ್ದೇಶದಿಂದ ಮೂರು ಅಥವಾ ನಾಲ್ಕು ನಿರ್ದಿಷ್ಟ ಕ್ರೀಡೆಗಳನ್ನು ಸೂಕ್ತ ವೃತ್ತಿಪರ ಕ್ರೀಡಾ ಏಜೆನ್ಸಿಯ ಮೂಲಕ 3 ವರ್ಷಗಳ ಅವಧಿಗೆ ಉತ್ತೇಜಿಸುವುದು. ಕ್ರೀಡಾ ಏಜೆನ್ಸಿಯ ಸೇವೆಗಳನ್ನು ಕೆಟಿಪಿಪಿ ಕಾಯ್ದೆಯ ಅವಕಾಶಗಳನ್ನು ಪಾಲಿಸುವ ಮೂಲಕ ಪಡೆದುಕೊಳ್ಳತಕ್ಕದ್ದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.
3 ವರ್ಷಗಳಿಗೆ ಅನುದಾನದ ವಿವರ: ರೂ 4.5 ಕೋಟಿ.
ಅನುಷ್ಠಾನ ಜವಾಬ್ದಾರಿ: ರಾಜ್ಯ ಯೋಜನಾ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶಕರು (ರಾಮಾಶಿಅ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

4. **ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವಿಜ್ಞಾನ ಚಟುವಟಿಕೆಗಳು:** ವಿಜ್ಞಾನ ಚಟುವಟಿಕೆಗಳಾದ ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಮಾದರಿ ರಚನೆ ಮುಂತಾದವುಗಳನ್ನು ಜಿಲ್ಲೆ ಮತ್ತು ರಾಜ್ಯ ಹಂತದಲ್ಲಿ ಆಯೋಜಿಸುವುದು ಹಾಗೂ ರಾಜ್ಯ ಹಂತದ ವಿಜೇತರನ್ನು ರಾಷ್ಟ್ರ ಮಟ್ಟಕ್ಕೆ ನಾಮ ನಿರ್ದೇಶನ ಮಾಡುವುದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.
2016-17ನೇ ಸಾಲಿಗೆ ಅನುದಾನದ ವಿವರ: ರೂ 0.75 ಕೋಟಿ.
ಅನುಷ್ಠಾನ ಜವಾಬ್ದಾರಿ: ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಅನುಮೋದನೆಯೊಂದಿಗೆ ರಾಜ್ಯ ಮತ್ತು ಜಿಲ್ಲಾ ಹಂತಗಳಲ್ಲಿ ಸೂಕ್ತ ಅನುಷ್ಠಾನ ಸಮಿತಿಗಳನ್ನು ರಚಿಸಬಹುದಾಗಿರುತ್ತದೆ.

5. **2016ರ ಜವಹರ್ ಲಾಲ್ ನೆಹರೂ ರಾಷ್ಟ್ರೀಯ ವಿಜ್ಞಾನ ಪ್ರದರ್ಶನದ ಆತಿಥ್ಯ:** 2016ರಲ್ಲಿ ಎನ್‌ಸಿಇಆರ್‌ಟಿಯ ಪಾಲುದಾರಿಕೆಯೊಂದಿಗೆ ಬೆಂಗಳೂರಿನಲ್ಲಿ ಜವಹರ್ ಲಾಲ್ ನೆಹರೂ ವಿಜ್ಞಾನ ಪ್ರದರ್ಶನಕ್ಕೆ ಆತಿಥ್ಯ ವಹಿಸುವುದು. ಇತರ ರಾಜ್ಯಗಳ ಸುಮಾರು 750 ವಿದ್ಯಾರ್ಥಿಗಳಿಗೆ ಆತಿಥ್ಯ ವಹಿಸುವುದರ ಜೊತೆಗೆ ಕರ್ನಾಟಕ ರಾಜ್ಯದ ಸುಮಾರು 10000 ವಿದ್ಯಾರ್ಥಿಗಳನ್ನು ಕಲಿಕಾ

ಅನುಭವಕ್ಕಾಗಿ ವಸ್ತು ಪ್ರದರ್ಶನಕ್ಕಾಗಿ ಕರೆದೊಯ್ಯತಕ್ಕದ್ದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

ಅನುದಾನದ ವಿವರ: ರೂ 1.50 ಕೋಟಿ.

ಅನುಷ್ಠಾನ ಜವಾಬ್ದಾರಿ: ರಾಜ್ಯ ಯೋಜನಾ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶಕರು (ರಾಮಾಶಿಅ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

6. **ಶಿಕ್ಷಣ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭೆಯನ್ನು ಗುರುತಿಸಿ ಪ್ರೇರೇಪಿಸುವ ಪ್ರಯತ್ನ:** ವಿದ್ಯಾರ್ಥಿಗಳನ್ನು ಆರ್ಥಿಕೇತರ ವಿಧಾನದಲ್ಲಿ ಗುರುತಿಸುವುದು, ವಿದ್ಯಾರ್ಥಿಗಳ ಉತ್ತಮ ಕಲಿಕೆಗೆ ಪರಿಣಾಮಕಾರಿ ವಿಧಾನವೆಂದು ಕಂಡುಬಂದಿರುತ್ತದೆ. ಶಿಕಣ ಪ್ರತಿಷ್ಠಾನವು ಸುಮಾರು 1750 ಶಾಲೆಗಳಲ್ಲಿ ದಾನಿಗಳ ಹಣವನ್ನು ಬಳಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುತ್ತದೆ. ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ 1000 ಶಾಲೆಗಳಲ್ಲಿ ಸುಮಾರು 1.2 ಲಕ್ಷ ವಿದ್ಯಾರ್ಥಿಗಳಿಗೆ 3 ವರ್ಷಗಳ ಅವಧಿಯಲ್ಲಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸಿ ಉತ್ತೇಜಿಸಲು ಶಿಕ್ಷಣ ಪ್ರತಿಷ್ಠಾನದ ಸಹಭಾಗಿತ್ವವನ್ನು ವಿಸ್ತರಿಸತಕ್ಕದ್ದು. ಕೆಟಿಪಿಪಿ ಕಾಯ್ದೆಯ ಸೆಕ್ಷನ್ 4(ಜಿ) ಅಡಿ ಅಗತ್ಯ ವಿನಾಯಿತಿಯನ್ನು ಪಡೆದುಕೊಳ್ಳತಕ್ಕದ್ದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಮತ್ತು ಕರಡು ಒಡಂಬಡಿಕೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

   3 ವರ್ಷಗಳಿಗೆ ಅನುದಾನದ ವಿವರ: ರೂ 11 ಕೋಟಿ. ಇದರಲ್ಲಿ ಸರ್ಕಾರದ ಅನುದಾನ ನಗದು ಮತ್ತು ಕಾಣಿಕೆ ರೂಪದಲ್ಲಿ (ರೂಢಿ ಸಾಮಗ್ರಿ ಮತ್ತು ತರಬೇತಿ) ರೂ 5.2 ಕೋಟಿಗಳಾಗಿರುತ್ತದೆ.

   ಅನುಷ್ಠಾನ ಜವಾಬ್ದಾರಿ: ರಾಜ್ಯ ಯೋಜನಾ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿರ್ದೇಶಕರು (ಸಶಿಅ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

7. **ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು:** 2016ರ ಪರೀಕ್ಷೆಯ ಫಲಿತಾಂಸದ ಆಧಾರ ಪ್ರತಿ ಶೈಕ್ಷಣಿಕ ತಾಲ್ಲೂಕು ಮತ್ತು ಶೈಕ್ಷಣಿಕ ಜಿಲ್ಲೆಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ಕೃಷ್ಠ ಸಾಧನೆಗೈದ ತಲಾ 3 ವಿದ್ಯಾರ್ಥಿಗಳಿಗೆ ಸುಮಾರು 750 ಲ್ಯಾಪ್‌ಟಾಪ್ ಗಣಕಯಂತ್ರಗಳನ್ನು (Lap top computers) ನೀಡತಕ್ಕದ್ದು. ಟ್ಯಾಪ್‌ನಿಂದ ಅಗತ್ಯ ಅನುಮೋದನೆಗಳನ್ನು ಪಡೆದುಕೊಳ್ಳತಕ್ಕದ್ದು.

   2016–17ನೇ ಸಾಲಿಗೆ ಅನುದಾನದ ವಿವರ: ರೂ 4 ಕೋಟಿ.

ಅನುಷ್ಠಾನ ಜವಾಬ್ದಾರಿ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಉಸ್ತುವಾರಿಯಲ್ಲಿ ನಿರ್ದೇಶಕರು (ಕಪ್ರೌಶಿಪಮಂ) ಇವರು ಚಟುವಟಿಕೆ ಅನುಷ್ಠಾನದ ಜವಾಬ್ದಾರಿ ಹೊಂದಿರುತ್ತಾರೆ.

8. **ಯೋಗಾಭ್ಯಾಸ ಚಟುವಟಿಕೆಗಳು:** ಈಶ (ISHA) ಪ್ರತಿಷ್ಠಾನದ ಬೋಧನಾ ಸಹಾಯದೊಂದಿಗೆ ಸುಮಾರು 2000 ಶಾಲೆಗಳ 3365 ಶಿಕ್ಷಕರಿಗೆ ಮೇ ಮತ್ತು ಜೂನ್ 2016ರಲ್ಲಿ ಯೋಗ ತರಬೇತಿ ನೀಡಲಾಗಿದೆ. ಹೆಚ್ಚಿನ ದಾಖಲಾತಿಯಿರುವ ಸುಮಾರು 2500 ಶಾಲೆಗಳಲ್ಲಿ ಇಂಥಹ ಶಿಕ್ಷಕರಿಂದ ಯೋಗ ಚಟುವಟಿಕೆಗಳನ್ನು ಪ್ರಾರಂಭಿಸತಕ್ಕದ್ದು. ಲಭ್ಯ ಅನುದಾನದಿಂದ ದೃಶ್ ಶ್ರವಣ ಉಪಕರಣಗಳನ್ನು ಬಾಡಿಗೆ ರೂಪದಲ್ಲಿ ಪಡೆಯತಕ್ಕದ್ದು. ಈ ಚಟುವಟಿಕೆಗೆ ವಿವರವಾದ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

   2016-17ನೇ ಸಾಲಿಗೆ ಅನುದಾನದ ವಿವರ: ರೂ 2 ಕೋಟಿ.

   ಅನುಷ್ಠಾನ ಜವಾಬ್ದಾರಿ: ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಉಸ್ತುವಾರಿಯಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಚಟುವಟಿಕೆ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

22/7/16

**(ಅಪರ್ಣಾ ಪಾವಟೆ)**
**ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ**
**ಉಪ ಕಾರ್ಯದರ್ಶಿ (ಯೋಜನೆ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ **ಶಿಕ್ಷಣ ಇಲಾಖೆಯಲ್ಲಿ 2016–17ನೆ ಸಾಲಿನಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲಾ ಉತ್ಸವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡುವ ಬಗ್ಗೆ.**

ಓದಲಾಗಿದೆ:
1. ನಿರ್ದೇಶಕರು (ಪ್ರೌಢ ಶಿಕ್ಷಣ) ಅವರ ಪ್ರಸ್ತಾವನೆ ಸಂ. ನಾ.ನ್ಯ.ಸಂ.ವಿ.ಪ್ರ.ಕಾ ಹಾಗೂ ಕಲಾ ಉತ್ಸವ:2016–17 ದಿನಾಂಕ 07.06.2016 ಮತ್ತು 13.06.2016
2. ವಿದ್ಯಾರ್ಥಿ ಪ್ರೇರಣಾ ಕಾರ್ಯಕ್ರಮಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು ಸರ್ಕಾರದ ಆದೇಶ ಸಂ.ಇಡಿ 79 ಮಾಹಿತಿ 2016 ಬೆಂಗಳೂರು ದಿನಾಂಕ 22.07.2016

**ಪ್ರಸ್ತಾವನೆ:**

1. ಮೇಲೆ 1ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು (ಪ್ರೌಢ ಶಿಕ್ಷಣ) ಅವರು 2016–17ನೆ ಸಾಲಿನಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲಾ ಉತ್ಸವ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ 12.99 ಕೋಟಿಗಳಿಗೆ ಮತ್ತು ಕ್ರೀಡಾ ಚಟುವಟಿಕೆಗಳ ಅನುಷ್ಠಾನಕ್ಕಾಗಿ ರೂ 3.02 ಕೋಟಿಗಳಿಗೆ ಪ್ರಸ್ತಾವನೆ ಸಲ್ಲಿಸಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.
2. ಮೇಲೆ 2 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ವಿದ್ಯಾರ್ಥಿ ಪ್ರೇರಣಾ ಕಾರ್ಯಕ್ರಮಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಹಂತದವರೆಗೂ ಸಾಂಸ್ಕೃತಿಕ ಸ್ಪರ್ಧೆಗಳು (ಪ್ರತಿಭಾ ಕಾರಂಜಿ), ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಕ್ರೀಡಾ ಚಟುವಟಿಕೆಗಳು, ಜಿಲ್ಲೆ ಮತ್ತು ರಾಜ್ಯ ಹಂತದಲ್ಲಿ ವಿಜ್ಞಾನ ಕಾರ್ಯಕ್ರಮಗಳು ಕಾರ್ಯಕ್ರಮದ ಅನುಮೋದನೆಗೊಂಡ ಚಟುವಟಿಕೆಗಳಡಿ ಸೇರಿರುತ್ತವೆ. ಆಡಳಿತಾತ್ಮಕ ಅನುಮೋದನೆ ಪ್ರಕಾರ ಸಾಂಸ್ಕೃತಿಕ ಚಟುವಟಿಕೆಗಳಿಗೆ ರೂ 9.25 ಕೋಟಿಗಳು, ಕ್ರೀಡಾ ಚಟುವಟಿಕೆಗಳಿಗೆ ರೂ 3 ಕೋಟಿಗಳು ಮತ್ತು ವಿಜ್ಞಾನ ಚಟುವಟಿಕೆಗಳಿಗೆ ರೂ 0.75 ಕೋಟಿಗಳನ್ನು ಅನುಮೋದಿಸಲಾಗಿದೆ.
3. 2016–17ನೆ ಸಾಲಿನಲ್ಲಿ ವಿದ್ಯಾರ್ಥಿ ಪ್ರೇರಣಾ ಉಪಕ್ರಮಗಳು ಚಟುವಟಿಕೆಯಡಿ ಲೆಕ್ಕ ಶೀರ್ಷಿಕೆ 2202–01–101–0–08 ರಡಿ ರೂ 15.00 ಕೋಟಿಗಳ ಅನುದಾನದ ಲಭ್ಯತೆ ಇರುತ್ತದೆ.

4. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲು ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 97 ಯೋಯೋಕ 2016, ಬೆಂಗಳೂರು ದಿನಾಂಕ: 22.07.2016**

5. 2016-17ನೆ ಸಾಲಿಗೆ ಅನುಷ್ಠಾನಗೊಳಿಸಲಾಗುವ ವಿದ್ಯಾರ್ಥಿ ಪ್ರೇರಣಾ ಉಪಕ್ರಮಗಳಡಿ, ಸಾಂಸ್ಕೃತಿಕ ಚಟುವಟಿಕೆಗಳು, ಕ್ರೀಡಾ ಚಟುವಟಿಕೆಗಳು ಮತ್ತು ವಿಜ್ಞಾನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ರೂ 750 ಲಕ್ಷಗಳನ್ನು ಈ ಕೆಳಗಿನ ವಿವರಗಳಂತೆ ಬಿಡುಗಡೆಗೊಳಿಸಲು ಅನುಮೋದನೆ ನೀಡಲಾಗಿದೆ.

| | | | ಬಿಡುಗಡೆಗೊಳಿಸಿದ ಅನುದಾನ ರೂ ಲಕ್ಷಗಳಲ್ಲಿ | | |
|---|---|---|---|---|---|
| ಕ್ರ.ಸಂಖ್ಯೆ | ಲೆಕ್ಕ ಶೀರ್ಷಿಕೆ | ಆಯವ್ಯಯ ಅಂದಾಜು 2016-17 (ಯೋಜನೆ) | ಪ್ರತಿಭಾ ಕಾರಂಜಿ | ಕ್ರೀಡಾ ಚಟುವಟಿಕೆಗಳು | ವಿಜ್ಞಾನ ಚಟುವಟಿಕೆಗಳು |
| 1 | 2202-01-101-0-08-059 ಇತರೆ ವೆಚ್ಚಗಳು | 900 | 300 | 50 | 50 |
| 2 | 2202-01-101-0-08-221 ಸಾಮಗ್ರಿಗಳು ಮತ್ತು ಸರಬರಾಜು | 200 | 75 | 25 | - |
| 3 | 2202-01-101-0-08-422 ಎಸ್.ಸಿ.ಪಿ | 250 | 100 | 40 | 15 |
| 4 | 2202-01-101-0-08-423 ಟಿ.ಎಸ್.ಪಿ | 150 | 75 | 10 | 10 |
| **5** | **ಒಟ್ಟು** | **1500** | **550** | **125** | **75** |

6. ಮುಂದಿನ ಬಿಡುಗಡೆಯನ್ನು ಆಗಸ್ಟ್ 2016ರಲ್ಲಿ ಮಾಡಲಾಗುವುದು.

7. **ಷರತ್ತುಗಳು:**

- ಅನುಮೋದಿತ ಚಟುವಟಿಕೆಗಳನ್ನು 2016ರ ಅಕ್ಟೋಬರ್ 10ನೇ ದಿನಾಂಕದೊಳಗೆ ಅನುಷ್ಠಾನಗೊಳಿಸಿ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.
- ಮೇಲೆ ಅನುಮೋದನೆಯಾದ ಅನುದಾನವನ್ನು ನಿಗಧಿತ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳತಕ್ಕದ್ದು.

- ಪ್ರತಿ ಚಟುವಟಿಕೆಯಡಿ ನಿರ್ವಹಿಸಬೇಕಾದ ಕ್ರಿಯಾ ಯೋಜನೆಯನ್ನು ಸೂಕ್ತವಾಗಿ ಯೋಜಿಸಿ ಕಾರ್ಯಕ್ರಮದ ಉದ್ದೇಶ ಸಫಲವಾಗುವಂತೆ ಅನುಷ್ಠಾನಗೊಳಿಸತಕ್ಕದ್ದು.
- ವೆಚ್ಚಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
- ವೆಚ್ಚ ಮಾಡುವ ಮುನ್ನ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅಧಿಕಾರಿಗಳು ಈ ಹಿಂದಿನ ಸಾಲಿನ ಆದೇಶದಲ್ಲಿ ತಿಳಿಸಿದಂತೆ ಎಲ್ಲಾ ನಿಯಮಗಳನ್ನು ಪಾಲಿಸಲು ಸೂಚಿಸಿದೆ.
- ಆರ್ಥಿಕ ಮಿತವ್ಯಯ ಆದೇಶ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸುವುದು.

8. ಈ ಆದೇಶವನ್ನು ಸರ್ಕಾರದ ಆದೇಶ ಸಂ. ಎಫ್‌ಡಿ 3 ಟಿಎಫ್‌ಪಿ 2016 ಬೆಂಗಳೂರು ದಿನಾಂಕ 02.04.2016ರಲ್ಲಿ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

22/7

(ಅಪರ್ಣಾ ಪಾವಟೆ)
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಉಪ ಕಾರ್ಯದರ್ಶಿ ಮತ್ತು ವಿಶೇಷಾಧಿಕಾರಿ (ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

**ಪ್ರತಿ:**

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು
2. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಕಾರ್ಯದರ್ಶಿಯವರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಕಲಬುರಗಿ.
8. ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು

9. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
10. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
11. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
12. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು
13. ಉಪ ನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ಬೆಂಗಳೂರು
14. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
15. ಕಛೇರಿ ಪ್ರತಿ